OS 122/2019
ಪಿಡಬ್ಲ್ಯೂ1

ದಿನಾಂಕ 21.06.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರಃ ಶ್ರೀ ಕೆ ಎಸ್ ಎ ವಕೀಲರಿಂದಃ

ದಾವಾ ಆಸ್ತಿಯ ಸ್ಥಿರಾಸ್ತಿಯಲ್ಲಿ ಹಾದುಹೋಗಿರುವ ರಸ್ತೆಗಳ ಬಗ್ಗೆ ವಾದಪತ್ರದಲ್ಲಿ ಕಾಣಿಸದೆ ಇರುವ ಬಗ್ಗೆ ಯಾವುದೇ ಸಕಾರಣ ಇಲ್ಲ ಸ.ನಂ.109/6 ದಾವಾ ಆಸ್ತಿಗೆ ತಾಗಿಕೊಂಡಿರುವ ಆಸ್ತಿ ಎಂದರೆ ಸರಿ. ಭೂ ನ್ಯಾಯಾಮಂಡಳಿಯಲ್ಲಿ ಮಂಜೂರಾದ ಸ್ಥಿರಾಸ್ತಿಯಲ್ಲಿ ಕರಿಯ ಶೆಟ್ಟಿ ಮತ್ತು ಕಿಟ್ಟಿ ಶೆಡ್ತಿಯವರಿಗೆ ಮಂಜೂರಾದ ಆಸ್ತಿ ಎಂದರೆ ಸಾಕ್ಷಿಯು ಕರಿಯಾ ಶೆಟ್ಟಿಯವರಿಗೆ ಮಾತ್ರ ಮಂಜೂರಾದ ಸ್ಥಿರಾಸ್ತಿ ಎಂದು ನುಡಿಯುತ್ತಾರೆ

ಶಾಲಿನಿ ಹೆಗ್ಡೆ ಎಂದರೆ ನನ್ನ ಪತ್ನಿ ಪ್ರಧಾನ ಸಿವಿಲ್ ನ್ಯಾಯಾಲಯದ ಓಎಸ್ ನಂ. 139/22 ರ ದಾವೆಯಲ್ಲಿ ನನ್ನ ಪತ್ನಿಯನ್ನು ಪ್ರತಿವಾದಿಯನ್ನಾಗಿ ಮಾಡಿರುತ್ತಾರೆ. ಈಗ ನನಗೆ ತೋರಿಸುತ್ತಿರುವ ದಾಖಲೆ ಓಎಸ್ ನಂ. 139/22 ರ ವಾದಪತ್ರವಾಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಸದ್ರಿ ದಾಖಲೆಯನ್ನು ನಿಡಿ2 ಎಂದು ಗುರುತಿಸಲಾಯಿತು. ಸದ್ರಿ ದಾವೆಯಲ್ಲಿ 39 ನೇ ಪ್ರತಿವಾದಿ ಶಾಲಿನಿ ಹೆಗ್ಡೆ ನನ್ನ ಪತ್ನಿ ಸದ್ರಿ ದಾವೆಯಲ್ಲಿ ಸ.ನಂ.109/4 ನನ್ನ ಪತ್ನಿ ಕ್ರಯವರೆಸಿದ್ದಾರೆ ಎಂಬ ಕಾರಣಕ್ಕಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೆ ಹಾಗೂ ಎಲ್ಲ ಹಕ್ಕುದಾರರು ಸೇರಿ ಸ್ಥಿರಾಸ್ತಿಯನ್ನು ವಿಕ್ರಯಿಸಿರುವುದಿಲ್ಲ ಎಂಬ ಕಾರಣನ್ನು ಅದರಲ್ಲಿ ತಿಳಿಸಿರುತ್ತಾರೆ. ಪ್ರತಿವಾದಿ ವಿಜಯ ಶೆಟ್ಟಿಯವರ ತಾಯಿಯ

ಹೆಸರು  ಸರೋಜಿನಿ ಶೆಟ್ಟಿ ಎಂದರೆ ಸರಿ. ಕಿಟ್ಟಿ ಶೆಡ್ತಿಯವರ ಮಗಳು ಸರೋಜಿನಿ ಶೆಡ್ತಿ ಎಂದರೆ ಸರಿ.  ಸರೋಜಿನಿ ಶೆಡ್ತಿ  ಓಎಸ್ ನಂ. 139/22 ರಲ್ಲಿ 32 ನೇ ಪ್ರತಿವಾದಿ.  ಕಿಟ್ಟಿ ಶೆಡ್ತಿಯವರು ಭೂ ನ್ಯಾಯಾಮಂಡಳಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ.  ನಿಡಿ-1 ರಲ್ಲಿ ಕಾಣಿಸಿರುವ ಹರಿಶ್ಚಂದ್ರ ಹೆಗ್ಡೆ ನಾನು. ನಿಡಿ-1 ರಲ್ಲಿ ಕಾಣಿಸಿರುವ ಕಿಟ್ಟಿ ಶೆಡ್ತಿ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ಸರೋಜಿನಿ ಶೆಡ್ತಿ ವಾಸವಾಗಿರುವ ಮನೆ ತೋಟದ ಮನೆ.  ಪ್ರತಿವಾದಿ ಮತ್ತು ಸರೋಜಿನಿ ಶೆಡ್ತಿ ಒಟ್ಟಿಗೆ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ವಾರಕ್ಕೊಮ್ಮೆ ಬಂದು ಹೋಗುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ಥಿರಾಸ್ತಿಯ ಗಡಿಗಳನ್ನು ಈಗ ಹೇಳಲು ಬರುವುದಿಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಮೇಲಿನ  ಎಲ್ಲಾ ವಿಚಾರಗಳನ್ನು ಮರೆಮಾಚಿ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆ ಹಾಗೂ ವಾದ ಪತ್ರದಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ